ನಗೆ ನಗುವುದು ಅವಳಿಗೆ ರೂಢಿಯಾಯಿತಂತೆ! ವಿಚಿತ್ರವೆಂದರೆ, ಹಿಂದೆ ಅಪರೂಪಕ್ಕೊಮ್ಮೆ ಕಾಣಿಸಿಕೊಳ್ಳುತ್ತಿದ್ದ ಆ ನಾಗಿನ್ ನಗೆ, ಈಚೀಚೆಗಂತೂ ಯಾರಾದರೂ ತಮ್ಮ ಕಷ್ಟಗಳನ್ನು ಹೇಳಿಕೊಂಡ ತಕ್ಷಣ ಅವಳ ಮುಖದ ಮೇಲೆ ಮೂಡುತ್ತಿತ್ತು. ಅವತ್ತು ಪ್ರೈಂ ಟೈಂನಲ್ಲಿ ಪ್ರಸಾರವಾದ ರಮೇಶ್ ರೆಡ್ಡಿಯ ಪೊಲಿಟಿಕಲ್ ಸ್ಟೋರಿಯಿಂದ ಉರಿದೆದ್ದ ಹೋಮ್ ಮಿನಿಸ್ಟರ್ ಚೇಲಾಗಳು ಅವನಿಗೆ ಫೋನ್ ಮಾಡಿ, 'ಮನೇಲಿ ಹೇಳಿ ಬಂದಿದೀಯೇನಲೇ ನಿನ್ನಕ್ಕನ್! ನಿನ್ನ ಕುಯ್ದಾಕ್ ಬುಡ್ತಿವಿ' ಎಂದು ಚೀರಿದ್ದರು. ಮನೆಗೆ ಬರುವ ಹಾದಿಯುದ್ದಕ್ಕೂ ಇದೇ ದಿಗಿಲಿನಲ್ಲಿದ್ದ ರಮೇಶ್, ಮಲ್ಲಿಕಾ ಕಂಡ ತಕ್ಷಣ, 'ದೇರ್ ಈಸ್ ಎ ರಿಯಲ್ ಡೆತ್ ತ್ರೆಟ್' ಎಂದಾಗ, ಅವಳು ಅದೇ ನಾಗಿನ್ ನಗೆ ನಕ್ಕಿದ್ದಳು. 'ಗಂಡಸರಿಗೆ ಏನಾದರೂ ತೊಂದರೆಯಾದರೆ ತಮಗೆ ಹೆಚ್ಚು ಆತುಕೊಳ್ಳುತ್ತಾರೆ ಎಂಬ ಒಳಆಸೆ ಹೆಂಗಸರಿಗಿರುತ್ತೇನೋ!' ಎಂದು ರಮೇಶ್ ರಾಗ ಎಳೆದಾಗ, ಮಲ್ಲಿಕಾ ಅದಕ್ಕೂ ನಾಗಿನ್ ನಗೆ ನಕ್ಕಿದ್ದಳು. ಬರಬರುತ್ತಾ ಆ ನಗೆ ರಮೇಶನಿಗೆ ರೂಢಿಯಾಗತೊಡಗಿತ್ತು; ಅಷ್ಟೇ ಅಲ್ಲ, ಅವನ ಮುಖದಲ್ಲೂ ಆ ವಿಕಟ ನಗೆ ಕಾಣಿಸಿಕೊಳ್ಳತೊಡಗಿತ್ತು.

## 5

ಮಲ್ಲಿಕಾ ಆರು ವರ್ಷಗಳ ಕೆಳಗೆ 'ಸಿನಿಮಾ ಸಂಜೆ'ಯಲ್ಲಿ ಹಿಂದಿ ನಟ ಹೃತಿಕ್ ರೋಷನ್ ಹಾಗೂ ಅವನ ಹೆಂಡತಿ ಸುಸೇನ್ ಖಾನ್ ಬೇರ್ಪಟ್ಟ ಕತೆಯನ್ನು ಪ್ರಸಾರ ಮಾಡಿದ ದಿನ, 'ಅಯ್ಯೋ ಆ ಸೆಲೆಬ್ರಿಟಿಗಳ ಸ್ಟೋರೀಲಿ ಏನಿರುತ್ತೆ, ಮಣ್ಣು!' ಎಂದು ರಮೇಶ್ ನಕ್ಕಾಗ, 'ಇದು...ಇದೇ ಪಕ್ಕಾ ನಾಗಿನ್ ನಗೆ' ಎಂದು ಮಲ್ಲಿಕಾ ರೇಗಿದ್ದಳು. 'ಡೇ ಅಂಡ್ ನೈಟ್ ಆ ಕಿತ್ತೋದ ಮಿನಿಸ್ಟ್ರುಗಳು–ಎಮ್ಮೆಲ್ಲೆಗಳ ಕತೆ ಬೆನ್ನುಹತ್ತಿ ಅಲೆಯುವ' ಅವನ ಮನಸ್ಸು ಎಲ್ಲ ಮಾರ್ದವಗಳನ್ನು ಕಳಕೊಂಡಿದೆ ಎಂಬ ತನ್ನ ತೀರ್ಮಾನವನ್ನು ರಮೇಶನ ಮುಖಕ್ಕೆ ಹೊಡೆದವಳಂತೆ ಹೇಳಿದ್ದಳು. 'ಚೈಲ್ಡ್ ಹುಡ್ ಫ್ರೆಂಡ್ಸ್ ಆಗಿದ್ದ ಹೃತಿಕ್ ರೋಷನ್–ಸುಸೇನ್ ಖಾನ್ ಮದುವೆಯಾದ ಹದಿನಾಲ್ಕು ವರ್ಷಗಳ ನಂತರ ಬೇರೆಯಾಗಲು ಏನು ಕಾರಣವಿರಬಹುದು ಎಂದು ಕೇಳುವ ಕುತೂಹಲ, ಮನುಷ್ಯತ್ವ ಯಾವುದೂ ನಿನ್ನಲ್ಲಿಲ್ಲವಲ್ಲ...' ಎಂದು ಗೊಣಗಿದ ಮಲ್ಲಿಕಾ, ರಮೇಶನ ಸಿನಿಕತನಕ್ಕೆ ಅಸಹ್ಯಗೊಂಡು ಟಕಟಕ ಮೆಟ್ಟಿಲಿಳಿದು ಕಣ್ಮರೆಯಾಗಿದ್ದಳು. ಆ ಚಳಿಯ ರಾತ್ರಿ ಮಲ್ಲಿಕಾಳ ಬೆಚ್ಚಗಿನ ಸಂಗ ಕಳಕೊಂಡ ಚಡಪಡಿಕೆ ರಮೇಶನನ್ನು ಮುತ್ತಿತೇ ಹೊರತು, ಹೃತಿಕ್–ಸುಸೇನ್ ಕತೆ ಏನೆಂದು ತಿಳಿಯುವ ಕುತೂಹಲ ಆಗಲೂ ಹುಟ್ಟಿರಲಿಲ್ಲ.

ಅವತ್ತು ಹುಟ್ಟದಿದ್ದ ಕುತೂಹಲ ಕೊರೊನಾ ಲಾಕ್‌ಡೌನ್ ಕಾಲದಲ್ಲಿ ಸುಸೇನ್ ಖಾನ್ ಹೃತಿಕ್ ಮನೆಯಲ್ಲಿ ಬಂದು ಉಳಿದಿದ್ದಾಳೆಂಬ ಪುಟ್ಟ ಸುದ್ದಿ ಓದಿದಾಗ ಹಠಾತ್ತನೆ ಹುಟ್ಟಿದ್ದು ರಮೇಶನಿಗೆ ಅಚ್ಚರಿ ಹುಟ್ಟಿಸಿತ್ತು! ಮಲ್ಲಿಕಾ ಅವತ್ತು ಹೇಳಿದ್ದ ಮಾತು ಈಗ ಸರಿಯಾಗಿ ಅವನ ಒಳಗಿಳಿಯತೊಡಗಿತು. 'ಆ ಕಿತ್ತೋದ ಮಿನಿಸ್ಟ್ರುಗಳು– ಎಮ್ಮೆಲ್ಲೆಗಳ ಕತೆ ಬೆನ್ನುಹತ್ತಿ' ಈಚೀಚೆಗಂತೂ ಬೇರೆಲ್ಲ ಕುತೂಹಲಗಳನ್ನೂ ತಾನು ಕಳೆದುಕೊಂಡಿದ್ದು ನಿಜ ಅನ್ನಿಸತೊಡಗಿತು. ತಾನು ಇದ್ದಕ್ಕಿದ್ದಂತೆ ಕೆಲಸ ಬಿಟ್ಟಿದ್ದರ ಹಿಂದೆ ಈಚಿನ ಮುಂಬಯಿ ಅಡ್ಡಾಟವೂ ಸೇರಿದಂತೆ, ಒಟ್ಟಾರೆಯಾಗಿ ಪುಢಾರಿಗಳ ಸಹವಾಸದಲ್ಲಿ ಹುಟ್ಟಿದ್ದ ಅಸಹ್ಯ ಕೂಡ ಸೇರಿತ್ತು ಎಂಬುದು ರಮೇಶನಿಗೆ ನೆನಪಾದ ತಕ್ಷಣ, ಮಲ್ಲಿಕಾಗೆ ನಿಜಕ್ಕೂ ದಾರ್ಶನಿಕ ದೃಷ್ಟಿಯಿದೆ ಎನ್ನಿಸಿತು. ಇದ್ದಕ್ಕಿದ್ದಂತೆ ಮಲ್ಲಿಕಾಳ ಮೋಹಕ ದನಿಯಲ್ಲಿ ಹೃತಿಕ್ ರೋಷನ್–ಸುಸೇನರ ಅವತ್ತಿನ ಕತೆಯನ್ನು ಕೇಳಬೇಕೆನ್ನಿಸತೊಡಗಿತು.

ಆದರೆ... ಆ ಕತೆಯೇನೆಂದು ಮಲ್ಲಿಕಾಳನ್ನು ಈಗ ಕೇಳುವುದು ಕಷ್ಟವಿತ್ತು. 'ಅದೇನು ಕತೆ?' ಎಂದು ಟೈಮ್ಸ್ ಪತ್ರಿಕೆಯ ಗೆಳೆಯ ಮೂರ್ತಿಗೆ ಫೋನ್ ಮಾಡಿದರೆ, 'ಅವರದೂ ಒಂತರಾ ನಿಮ್